ಫ್ಯಾಕ್ಸ್ / Fax : 080-25586321
ಈಮೇಲ್ / E-mail : ho@kspcb.gov.in
ವೆಬ್‌ಸೈಟ್ / Website : http://kspcb.gov.in

25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರಭವನ", 1 ರಿಂದ 5ನೇ ಮಹಡಿಗಳು, ನಂ.49, ಚರ್ಚ್‌ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಸಂಖ್ಯೆ: ಮಾನಿಮ 01 ಮಾಹಿತಿ 2013/ 1786 ದಿನಾಂಕ: 20 AUG 2015

## ಅಧಿಸೂಚನೆ

ವಿಷಯ: ಮಂಡಳಿಯ ಅಧ್ಯಕ್ಷರ, ಸದಸ್ಯ ಕಾರ್ಯದರ್ಶಿಯವರ ಮತ್ತು ಆಡಳಿತ ವಿಭಾಗಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಮೊದಲನೇ ಮೇಲ್ಮನವಿ ಪ್ರಾಧಿಕಾರಿಯನ್ನು ನೇಮಿಸುವ ಬಗ್ಗೆ.

ಉಲ್ಲೇಖ: ಸಂಖ್ಯೆ: ಮಾನಿಮ 01 ಮಾಹಿತಿ 2013/2488 ದಿನಾಂಕ: 31-10-2014

((((()))))

ಮಾಹಿತಿ ಹಕ್ಕು ಅಧಿನಿಯಮ 2005 ರ ನಿಯಮ 5 (1) ಮತ್ತು 5 (2) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮಂಡಳಿಯ ಅಧ್ಯಕ್ಷರ ಕಛೇರಿ, ಸದಸ್ಯ ಕಾರ್ಯದರ್ಶಿಯವರ ಕಛೇರಿ ಮತ್ತು ಆಡಳಿತ ವಿಭಾಗಕ್ಕೆ ಸಂಬಂಧಿಸಿದಂತೆ ಶ್ರೀ ಕೆ.ಎಸ್.ಕಿರಣ್, ಸಾರ್ವಜನಿಕ ಸಂಪರ್ಕಾಧಿಕಾರಿ, ಕೇಂದ್ರ ಕಛೇರಿ ಇವರನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನಾಗಿ ಹಾಗೂ ಶ್ರೀಮತಿ ಟಿ.ಮಂಜುಳಾಕ್ಷಿ, ಸಹಾಯಕ ಆಡಳಿತಾಧಿಕಾರಿ, ಆಡಳಿತ ವಿಭಾಗ, ಕೇಂದ್ರ ಕಛೇರಿ ಇವರನ್ನು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನಾಗಿ ಉಲ್ಲೇಖಿತ ಪತ್ರದಂತೆ ನಾಮನಿರ್ದೇಶನ ಮಾಡಲಾಗಿತ್ತು.

ಪ್ರಸ್ತುತ ಶ್ರೀ.ಕೆ.ಎಸ್.ಕಿರಣ್ ರವರು ದಿನಾಂಕ: 17-8-2015 ರಿಂದ 16-9-2015 ರವರೆಗೆ ರಜೆಯಲ್ಲಿರುವ ಕಾರಣ ಶ್ರೀ ವೈ.ಎಸ್.ಹರಿಶಂಕರ್, ಪರಿಸರ ಅಧಿಕಾರಿ, ಕೇಂದ್ರ ಕಛೇರಿ ಇವರನ್ನು ಈ ರಜಾ ಅವಧಿಗೆ ಹಾಗೂ ಮೇಲ್ಕಂಡ ವಿಭಾಗಗಳಿಗೆ ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

ಇದರೊಂದಿಗೆ ಮಾಹಿತಿ ಹಕ್ಕು ಅಧಿನಿಯಮ 2005 ರ ನಿಯಮ 19 (1) ರ ಅಡಿಯಲ್ಲಿ ಶ್ರೀ ವಿಜಯ ಕುಮಾರ್, ಐ.ಎಫ್.ಎಸ್, ಸದಸ್ಯ ಕಾರ್ಯದರ್ಶಿ, ಕ.ರಾ.ಮಾ.ನಿ.ಮಂ ಇವರನ್ನು ಮೊದಲನೇ ಮೇಲ್ಮನವಿ ಪ್ರಾಧಿಕಾರಿಯನ್ನಾಗಿ ನೇಮಿಸಲಾಗಿದೆ.

(ಡಾ॥ ವಾಮನ್ ಎನ್.ಆಚಾರ್ಯ)
ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಹಾಗೂ ಸಾರ್ವಜನಿಕ ಪ್ರಾಧಿಕಾರ

ಪ್ರತಿಗಳು:

1. ಸದಸ್ಯ ಕಾರ್ಯದರ್ಶಿಯವರ ಮಾಹಿತಿಗಾಗಿ
2. ಶ್ರೀ ವೈ.ಎಸ್.ಹರಿಶಂಕರ್, ಪರಿಸರ ಅಧಿಕಾರಿ, ಕೇಂದ್ರ ಕಛೇರಿ ಇವರ ಮಾಹಿತಿಗಾಗಿ
3. ಮುಖ್ಯ ಪರಿಸರ ಅದಿಕಾರಿಗಳು/ಹಿರಿಯ ಪರಿಸರ ಅಧಿಕಾರಿಗಳು/ಪ್ರಾದೇಶಿಕ ಅಧಿಕಾರಿಗಳು/ಮುಖ್ಯ ಹಣಕಾಸು/ಸಾರ್ವಜನಿಕ ಸಂಪರ್ಕಾಧಿಕಾರಿ
4. ಕಾನೂನು ವಿಭಾಗ/ಕಟ್ಟಡ ವಿಭಾಗ/ ಆಡಳಿತ ವಿಭಾಗ
5. ಸಂಬಂಧಪಟ್ಟ ಅಧಿಕಾರಿಯವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
6. ಹೆಚ್ಚುವರಿ ಪ್ರತಿ/ಶಾಖಾ ರಕ್ಷಕ ಕಡತ